1884ನೇ ಇಸವಿ ಅರ್ಜೀ ನಂಬರ್ 132.

ಮೃತಪಟ್ಟ ನಗರ ತಾ॥ ಅರ್ನಾಡು ಮಾಗಣಿ ಶಾನಭೋಗ ಮರಿಯಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೋತನಕಟ್ಟೆ ಸೇತು ಮಾಧವಾಚಾರ್ಯ ಮೃತಪಟ್ಟ ಸದರೀ ಮರಿಯಪ್ಪನ ದತ್ತು ಮಗನಾದ ಮೈನರ್ ಗುಂಡಪ್ಪನಿಗೆ ಜನಕ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ತೀರ್ಥಹಳ್ಳಿ ಸ್ಥಳದ ಹೋತನಕಟ್ಟೆ ಸೇತು ಮಾಧವಾಚಾರ್ಯನು ನಗರ ತಾ॥ ಪರವೆಟ್ಟ ವಾಸ ಸ್ಥನಾಗಿ ಮೃತಪಟ್ಟ ಶಾನಭೋಗ ಮರಿಯಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ಮೃತಪಟ್ಟ ಮರಿಯಪ್ಪನ ದತ್ತು ಮಗ ಮೈನರ್ ಗುಂಡಪ್ಪನಿಗೆ ಗಾರ್ಡಿಯನ್ನಾಗಿ ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸೇತು ಮಾಧವಾಚಾರ್ಯನ ಅರ್ಜೀಯನ್ನು 1885ನೇಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾನಭೋಗ ಮರಿಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಡಿಸಂಬರ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 10ನೇ ಡಿಸಂಬರ್ 1884.

ಹೊನ್ನಾಳಿ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ನಾಗೇಶರಾಯರಿಗೆ ಕ್ರಿಮಿನಲ್ ಪ್ರೊಸೀಜ್ಯರ್ ಕೋಡ್ 23ನೇ ಸೆಕ್ಷನ್ (*b*) ಕ್ಲಾಜ್ ಅನುಸರಿಸಿ,

1. ವಿಚಾರಣೆ ಮಾಡುವದಕ್ಕೆ ಅಧಿಕಾರವುಳ್ಳ ಮೊಕದ್ದಮೆಗಳಲ್ಲಿ ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳಲಿಕ್ಕೂ.
2. ಲಾಷ್ ವಿಚಾರಣೆಬಗ್ಯೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ಜಿ. ಯಫ್. ಮೆಕ್ಲಿಲ್ಲರ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 309.

ಮೃತಪಟ್ಟ ಪರ್ಷ ಅಮೃತ ಮಹಲ್ ಮುತ್ಸದಿ ವೆಂಕಟರಾಮಯ್ಯಂಗಾರ್ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಬಿ. ಕೃಷ್ಣಯ್ಯಂಗಾರ್ ಮೃತಪಟ್ಟ ಸದರೀ ವೆಂಕಟರಾಮಯ್ಯಂಗಾರ್‌ಗೆ ಮಗನಾಗಬೇಕೆಂಬ ಹಕ್ಕುದಾರೀ ಮೇರ್ಗೆ ಬೆಂಗಳೂರು ಸ್ಥಳದ ಮೆ॥ ಬಿ. ಕೃಷ್ಣಯ್ಯಂಗಾರ್, ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೆಂಕಟರಾಮಯ್ಯಂಗಾರ್ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ನಂ. ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೆ॥ ಬಿ. ಕೃಷ್ಣಯ್ಯಂಗಾರರ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 15ರಲ್ಲು ಕೇಳಿ, ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಮಯ್ಯಂಗಾರ್ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಡಿಸಂಬರ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 310.

ಮೃತಪಟ್ಟ ಮುದ್ದಗಿರಿ ತಾಲ್ಲೂಕು ಹೊಳವನಹಳ್ಳಿ ಸಂಮತು ರಾಂಪುರದ ಭದ್ರಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ರುದ್ರಪ್ಪನು, ಮೃತಪಟ್ಟ ಸದರೀ ಭದ್ರಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ರಾಂಪುರದ ಸ್ಥಳದ ರುದ್ರಪ್ಪನೆಂಬವನು, ಸದರೀ ರಾಂಪುರದ ವಾಸಸ್ಥರಾಗಿ ಮೃತಪಟ್ಟ ಭದ್ರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುದ್ರಪ್ಪನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 15ರಲ್ಲು ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಈ ಕಾಲದಲ್ಲಿ ಸದರೀ ಮೃತಪಟ್ಟ ಭದ್ರಪ್ಪನ ಆಸ್ತಿಗೆ ಹಕ್ಕು ರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1844ನೇ ಇಸವಿ ಡಿಶಂಬರ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ತಾರೀಖು 10ನೇ ಡಿಶಂಬರ್ 1884.

" 50 ರೂಪಾಯಿ ಇನಾಂ. "

ಸ್ರ್ 1884ನೇ ಇಸವಿ ನವಂಬರ್ 14ನೇ ಮಂಗಳವಾರ ಆ ಸುಮಾರಿನಲ್ಲಿ ಬೆಂಗಳೂರು ಪಟ್ಟಣ ಸುಲತಾನ್ ಪೇಟೆಯಲ್ಲಿ ಇರುವ ಮೆ|| ಮುದ್ದಪ್ಪನವರ ಮನೆಯಲ್ಲಿ ಹಾಫ್ ಮತ್ತು ಟಿಲ್ಸ್‌ಯವರಿಂದ ತಯಾರ್ಮಾಡಲ್ಪಟ್ಟ 23857ನೇ ನಂಬರುಳ್ಳ ಭಂಗಾರದ ಕ್ರಾನಾಮಿಟರ್ ವಾಚ್ ಯಾನೇ ಘಡಿಯಾರ ಮತ್ತು 9 ತೊಲೆ ತೂಕವುಳ್ಳ ಅದರ ಭಂಗಾರದ ಸರಪಣಿ ಸಹಾ ಚೋರಿಯಾಗಿರುವ ಸಬಬ್ ಅವುಗಳು ಪತ್ತೆ ಆಗುವಂತೆ ವರ್ತಮಾನ ಕೊಡುವ ಮತ್ತು ಅವುಗಳನ್ನು ಪತ್ತೇಮಾಡಿಕೊಡುವ ಮನುಷ್ಯ ಯಾ ಮನುಷ್ಯರಿಗೆ ಸದರೀ ಮುದ್ದಪ್ಪನವರಿಂದ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಕೃಷ್ಣಯ್ಯಂಗಾರ್, ಫಾರ್ ಡಿಪ್ಯುಟಿ ಕಮ್ಮಿಷನರ್.

ತಾರೀಖು 6ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ್ರ್ 1885ನೇ ಇಸವಿ ಫೆಬ್ರವರಿ ಗುರ್ತೇ ತಾರೀಖು ಲಾಗಾಯಿತು ಜೂನ್ 30ನೆ|| ತಾರೀಖಿನವರಿಗೆ ಇದರಡಿ ಕಂಡ ಪ್ಲಾಂಟೇರ್ಷಗಳು ಭೇಟಿಗೇ ಕಾಲಕ್ಕೊತ್ತಿಸ್ಕರ ಮುಚ್ಚಲ್ಪಡುತ್ತವೆ. ಭೇಟಿಗಾರರು ಪ್ಲಾಂಟೇರ್ಷಗಳ ಚಾರ್ಜ್‌ನಲ್ಲಿರುವ ಫಾರೆಸ್ಟ್ಸ್‌ಅಪ್ಪೆಂಟಿಸ್‌ಯವರ ವಿಶೇಷ ಅಪ್ಪಣೆಯಾಯಿ ಸದರೀ ಪ್ಲಾಂಟೇರ್ಷಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ

ಪ್ಲಾಂಟೇರ್ಷಗಳು.		ತಾಲ್ಲೂಕು.
ಕಾಡಗೋಡಿ		ಹೊಸಕೋಟೆ
ಜಡಿಗೇನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್	(A. B. ಮ C.)	ಡಿಟೋ
ತಟ್ನೂರು		ಡಿಟೋ
ತಿಂಡಲ್		ಹೊಸಕೋಟೆ ಮತ್ತು ಮಾಲೂರು
ಅಪ್ಪಸಂದ್ರ		ಡಿಟೋ
ದೊಡ್ಡಹರಡಿ		ಹೊಸಕೋಟೆ ಮತ್ತು ಕಿಲ್ಲಘಟ್ಟ
ಚಿಕ್ಕಹರಡಿ		ಡಿಟೋ
ರಾಮಚಂದ್ರಾಪುರ		ಮಾಲೂರು
ಮಾರಸಂದ್ರ		ಡಿಟೋ
ಕುರಂಡಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ಜಂಗಮಕೋಟೆ		ಕಿಲ್ಲಘಟ್ಟ
ಈನೂರು		ಬೆಂಗಳೂರು

ಯಸ್. ಏ. ಬಾಪೂರಾವ್,
ಫಾರೆಸ್ಟ್ಸ್ ಅಪ್ರೆಂಟಿಸ್ ಇನ್ ಬಾರ್ಟ್ ಪ್ಲಾಂಟೇರ್ಷಸ್.

ನೋಟೀಸ್.

ತಾರೀಖು 13ನೇ ಡಿಶಂಬರ್ 1884.

ಇದರಿಂದ ಪ್ರಕಟಿಸುವದೇನಂದರೆ,—ಸ್ರ್ 1885ನೇ ಇಸವಿ ಜನವರಿ 15 ಮತ್ತು 16ನೇ ಮಂಗಳವಾರಗಳಲ್ಲಿ ಲಾಲ್‌ಬಾಗಿನೊಳಗೆ "ಹಾರ್ಟಿಕಲ್ಚರಲ್‌ಷೋ" ಯಾನೆ ಫಲ ಪುಷ್ಪ ಪ್ರದರ್ಶನ ವಿನೋದವು ನಡೆಯುವದು.

ಇನಾಂ ಪಟ್ಟಿಗಳು ಇದರಡಿ ರುಜು ಮಾಡಿರುವವರಲ್ಲಿ ದೊರೆಯುವವು.

ಜೆ. ಕ್ಯಾಮರ್ಡ್,
ಸೂಪರಿಂಟೆಂಡೆಂಟ್, ಲಾಲ್‌ಬಾಗ್.